**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರಮೇಶ ಹೆಬಸೂರು | ಸಿ.ಡಬ್ಲೂ-10 |
| ತಂದೆಯ ಹೆಸರು | : | ಮಂಜುನಾಥ | ಪಿ.ಡಬ್ಲೂ-09 |
| ವಯಸ್ಸು | : | 22 ವರ್ಷ | |
| ಉದ್ಯೋಗ | : | ಫೈನಾನ್ಸ ಕೆಲಸ | |
| ವಾಸ ಸ್ಥಳ | : | ಮಣಿಕಂಠ ನಗರ , ಧಾರವಾಡ. | |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತುಃ **17/08/2026**

**ಮುಖ್ಯ ವಿಚಾರಣೆ : ಮಾನ್ಯ ಹಿಸಸಅ ರವರಿಂದ :**

ಸುಮಾರು ಒಂದು ವರ್ಷದ ಹಿಂದೆ ನಾನು ಮನೆಯಲ್ಲಿದ್ದಾಗ ರಾತ್ರಿ 10-30 ರ ಸಮಯದಲ್ಲಿ ಹೊರಗಡೆ ಜೊರಾಗಿ ಶಬ್ದ ಕೇಳಿ ಬಂತು ತಕ್ಷಣ ಮನೆಯ ಹೊರಗಡೆ ಬಂದು ನೋಡಲಾಗಿ ಎರಡು ಮೊಟಾರು ಸೈಕಲ್ ಮಧ್ಯೆ ಅಪಘಾತವಾಗಿ ಒಬ್ಬ ವ್ಯಕ್ತಿ ಕೆಳಗೆ ಬಿದಿದ್ದನು ಆತನಿಗೆ ರಕ್ತ ಗಾಯಗಳಾಗಿದ್ದವು. ನಂತರ ಆತನನ್ನು ನಾವೇ ಧಾರವಾಡದ ಸಿವಿಲ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ ಈ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

**(**ಮಾನ್ಯ ಹಿಸಸಅರವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ**)**

## ಪಾಟೀಸವಾಲು : ಮಾನ್ಯ ಹಿಸಸಅವರಿಂದ

ದಿಃ 29-05-2025 ರಂದು ರಾತ್ರಿ ಬಾಡಿಗೆ ತರಿಕವಾಗಿ ಪ್ರಯಾಣಿಕರನ್ನು ಹತ್ತಿಸಿಕೊಂಡು ಅವರನ್ನು ಇಳಿಸಿ ಮರಳಿ ಮಣಿಕಂಠ ನಗರದ ತಾಯಮ್ಮಾನವರ ಕಲ್ಯಾಣ ಮಂಟಪದ ಹತ್ತಿರ ಅಪಘಾತವಾಗಿತ್ತು. ...........................

................................ ರಾತ್ರಿ 10.15 ಘಂಟೆ ಆಗಿರಬಹುದು ಎಂದು ಈಗ ಓದಿ ಹೇಳಿದಂತೆ ನಾನು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.26 ಎಂದು ಗುರುತಿಸಲಾಯಿತು. ದಿಃ 16-07-2025 ರಂದು ಅಪಘಾತ ದಲ್ಲಿ ಗಾಯಗೊಂಡಿದ್ದ ಶ್ರೀಧರ ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಯಲ್ಲಿ ಮೃತ ಪಟ್ಟಿದ್ದಾನೆ ಅಂತಾ ಗೊತ್ತಾಯಿತು ಎಂದು ನಾನು ಪೊಲೀಸರಿಗೆ ಮರು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಮರು ಹೇಳಿಕೆಯನ್ನು ನಿಪಿ.27 ಎಂದು ಗುರುತಿಸಲಾಯಿತು.

ದಿಃ 23-07-2025 ರಂದು ಠಾಣೆಯಲ್ಲಿ ಪೊಲೀಸ್ ಠಾಣೆಯಲ್ಲಿ ಮೊಟರ ಸೈಕಲ ನಂ.ಕೆಎ 25 ಇ ಎಕ್ಸ - 2094...................................................................................................................... ನನಗೆ ತೋರಿಸಿದ್ದು ಇರುತ್ತದೆ. ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಮರು ಹೇಳಿಕೆಯನ್ನು ನಿಪಿ.28 ಎಂದು ಗುರುತಿಸಲಾಯಿತು. ದಿಃ 29-07-2025 ರಂದು ಠಾಣೆಗೆ ಕರೆಸಿ ಆರೋಪಿಯನ್ನು ತೋರಿಸಿ ಆತನ ಹೆಸರು ಮೆಹಬೂಬಅಲಿ ............................................................ ಚಾಲಕನಿಗೆ ತೋರಿಸಿದ್ದು ಇರುತ್ತದೆ. ಸದರಿ ಮರು ಹೇಳಿಕೆಯನ್ನು ನಿಪಿ.29 ಎಂದು ಗುರುತಿಸಲಾಯಿತು. ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ 1 ನೇ ಆರೋಪಿಯನ್ನು ತೋರಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ನಿಪಿ.26 ರಿಂದ

29 ರಂತೆ ಹೇಳಿಕೆಗಳನ್ನು ನೀಡಿದ್ದರೂ ಸಹಿತ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು : ಆರೋಪಿ ಪರ ಶ್ರೀ. ಎಂ ಜಿ ಆರ್ ವಕೀಲರು ಪಾಟೀ ಸವಾಲು ಇಲ್ಲ ಅಂತ ಹೇಳಿದ್ದಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

ಪ್ರ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.